

# ಬೆಳವಲದ ಹಾಡುಹಕ್ಕಿ

■ ಪ್ರವೀಣ ಕುಲಕರ್ಣಿ

‘ಕೊಡುವುದೇನು ಕೊಂಬುದೇನು...’, ‘ಬೆಳುದಿಂಗಳು ನೋಡ...’, ‘ನಾನು ಬಡವಿ, ಆತ ಬಡವ...’, ‘ನೀ ಹಿಂಗ ನೋಡಬ್ಯಾಡ ನನ್ನ...’ – ಕವಿ ದ.ರಾ. ಬೇಂದ್ರೆ ಅವರ ಇಂತಹ ಗಹನಾರ್ಥವನ್ನು ಹುದುಗಿಸಿಟ್ಟುಕೊಂಡ ಗೀತೆಗಳ ಭಾವಾರ್ಥವು ಥಟ್ಟಂತ ಮನಸ್ಸಿನ ಆಳಕ್ಕೆ ಇಳಿಯಬೇಕೇ? ಹಾಗಾದರೆ ಈ ಗೀತೆಗಳನ್ನು ಗಾಯಕಿ ಅನುರಾಧಾ ಧಾರೇಶ್ವರ ಅವರ ಕಂಠಸಿರಿಯಿಂದ ಕೇಳಿ ಎನ್ನುವ ಮಾತು ಜನಜನಿತವಾದ ಕಾಲವೊಂದಿತ್ತು. ಇದಕ್ಕೆ ಕಾರಣ, ಭಾವಾರ್ಥವನ್ನು ಅರಿತುಕೊಂಡು ಗೀತೆಗೆ ಧ್ವನಿಯಾಗುತ್ತಿದ್ದ ಈ ಗಾಯಕಿಯ ವಿಶಿಷ್ಟ ಗುಣ. ಅವರ ಧ್ವನಿಯ ಏರಿಳಿತಗಳು, ‘ಶಬ್ದ ಗಾರುಡಿಗ’ನ ಪದಗಳ ಸರಸಾಟದ ಪ್ರಭಾವವನ್ನು ಕೇಳುಗರ ಮನಸ್ಸಿನ ಮೇಲೆ ಬಲು ಸ್ಪಷ್ಟವಾಗಿ ಮೂಡಿಸಿಬಿಡುತ್ತಿದ್ದವು. ಧಾರವಾಡ ಆಕಾಶವಾಣಿ ಕೇಂದ್ರದಿಂದ ಅವರ ಸಂಗೀತದ ಹೊನಲು ಧಾರೆಯಾಗಿ ಹರಿದದ್ದನ್ನು, ಆ ಹೊನಲಿನಲ್ಲಿ ತಾವು ಮಿಂದೇಳುತ್ತಿದ್ದುದನ್ನು ಹಿಂದಿನ ತಲೆಮಾರಿನ ಧಾರವಾಡಿಗರು ತುಂಬಾ ಹೆಮ್ಮೆಯಿಂದ ನೆನಪಿಸಿಕೊಳ್ಳುವರು. ಹೌದು, ಅನುರಾಧಾ ಅವರು ಬೇಂದ್ರೆ ಹಾಗೂ ಎನ್ಕೆ ಕುಲಕರ್ಣಿ ಅವರ ಪರಂಪರೆಯ ಕೊಂಡಿ ಆಗಿದ್ದವರು. ಆ ಕೊಂಡಿ ಈಗ ಕಳಚಿಹೋಗಿದೆ.

‘ಓ ನನ್ನ ದೇಶ ಬಾಂಧವರೇ...’ ಹಾಡನ್ನು ಇವರ ಧ್ವನಿಯಲ್ಲಿ ಕೇಳಿ, ಕಣ್ಣೀರು ಹಾಕಿದವರಿಗೆ ಲೆಕ್ಕವಿಲ್ಲ. ದೇಶ ಭಕ್ತಿಯನ್ನು ಬಡಿದೆಬ್ಬಿಸುವ ಈ ಗೀತೆಯು ಕನ್ನಡದ ಸೀಮೆಯನ್ನೂ ದಾಟಿ, ದೇಶದ ಹಲವೆಡೆ ಜನಪ್ರಿಯತೆಯನ್ನು ಗಳಿಸಿತ್ತು. ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಎದುರೂ ಹಾಡಿದ ಹೆಗ್ಗಳಿಕೆ ಅನುರಾಧಾ ಅವರದು. ಹುಬ್ಬಳ್ಳಿಯ ಈ ಅಪ್ಪಟ ಸಂಗೀತ ಪ್ರತಿಭೆಯು ಧಾರವಾಡ ಆಕಾಶವಾಣಿ ಕೇಂದ್ರದಲ್ಲಿ ಕಾರ್ಯಕ್ರಮ ನಿರೂಪಕಿಯಾಗಿ ಸೇರಿಕೊಂಡಾಗ, ಅಲ್ಲಿ ಕಾರ್ಯಕ್ರಮ ನಿರ್ವಾಹಕರಾಗಿದ್ದವರು ಎನ್ಕೆ ಅವರು. ಹೀಗಾಗಿ ಎನ್ಕೆ ಅವರ ಒಡನಾಟದಲ್ಲಿ ಬೆಳೆದರು ಅನುರಾಧಾ. ಬೇಂದ್ರೆಯವರು ಆಗಾಗ ಎನ್ಕೆ ಅವರ ಮನೆಗೆ ಮಗನ ಸ್ಕೂಟರ್‌ನಲ್ಲಿ ಬರುತ್ತಿದ್ದರಂತೆ. ಬೇಂದ್ರೆ ಮತ್ತು ಎನ್ಕೆ ಅವರ ಮಧ್ಯೆ ಕುಮಾರವ್ಯಾಸ ಭಾರತದ ಕುರಿತು, ನಾಟಕಗಳ ಕುರಿತು, ಹೊಸ ತಲೆಮಾರಿನ ಸಾಹಿತ್ಯದ ಕುರಿತು ಸುದೀರ್ಘ ಹರಟೆ ನಡೆಯುತ್ತಿತ್ತಂತೆ. ‘ಅದೇನು ಕಾಡು ಹರಟೆ ಆಗಿರಲಿಲ್ಲ. ವಿದ್ವತ್‌ಪೂರ್ಣ ಚರ್ಚೆಯಾಗಿರುತ್ತಿತ್ತು. ನಾವುಗಳೆಲ್ಲ ಬೆರಗುಗಣ್ಣಿನಿಂದ ಆಲಿಸುತ್ತಿದ್ದೆವು’ ಎಂದು ಅನುರಾಧಾ ಅವರೊಮ್ಮೆ ನೆನಪಿಸಿಕೊಂಡಿದ್ದರು.

ಅನುರಾಧಾ ಅವರ ಪಾಲಿಗೆ ಬೇಂದ್ರೆ ಹೇಗೆ ನೆಚ್ಚಿನ ಕವಿಯೋ, ಬೇಂದ್ರೆ ಅವರ ಪಾಲಿಗೆ ಅನುರಾಧಾ ಅವರು ಹಾಗೇ ನೆಚ್ಚಿನ ಗಾಯಕಿಯಾಗಿದ್ದರು. ಗಾಯಕರೊಬ್ಬರು ‘ನೀ ಹಿಂಗ ನೋಡಬ್ಯಾಡ...’ ಗೀತೆಗೆ ರಾಗ ಸಂಯೋಜನೆ ಮಾಡಿದ ರೀತಿ ಕವಿಗೆ ಸುತಾರಾಂ ಹಿಡಿಸಿರಲಿಲ್ಲ. ‘ಈ ಹಾಡಿನ್ಯಾಗ ಭಾವ ಎಲ್ಲದ’ ಎಂದು ಸಿಟ್ಟಿನಿಂದ ಕೇಳಿದ್ದರು. ಮಗ ಸತ್ತ ದುಃಖದಲ್ಲಿ ಹೆಂಡತಿಗೆ ದೈನ್ಯದಿಂದ ಹೇಳುವ ಈ ಮಾತನ್ನು ಅನುರಾಧಾ ಅವರು ಕರುಣಾರಸ ಉಕ್ಕುವಂತೆ ಹಾಡಿ ತೋರಿಸಿದ್ದರು. ‘ಈ ಹಾಡನ್ನು ಹಿಂಗss ಹಾಡಬೇಕು’ ಎಂದು ಬೇಂದ್ರೆ ಮೆಚ್ಚುಗೆ ಸೂಸಿದ್ದರು. ಕುಟುಂಬ ಯೋಜನೆ ಕುರಿತು ಬೇಂದ್ರೆ ಅವರು ಬರೆದ ಗೀತೆಗೆ ಕೆಲವೇ ಕ್ಷಣಗಳಲ್ಲಿ ರಾಗಸಂಯೋಜಿಸಿ ಅವರಲ್ಲಿ ಬೆರಗು ಮೂಡಿಸಿದ್ದರು ಈ ಗಾಯಕಿ. ಅವರ ಸಂಚಿಯಲ್ಲಿ ಇಂತಹ ನೂರಾರು ಅನುಭವದ ಕಥೆಗಳಿದ್ದವು.

ಕನ್ನಡದ ಸುಗಮ ಸಂಗೀತ ಕ್ಷೇತ್ರಕ್ಕೆ ಹಿರಿಮೆ ತಂದುಕೊಟ್ಟವರಲ್ಲಿ ಪ್ರಮುಖರಾದ ಅನುರಾಧಾ ಅವರಿಗೆ ರಾಮಚಂದ್ರ ಜಂತ್ರಿ ಅವರಂತಹ ಆಕಾಶವಾಣಿ ಕಲಾವಿದರು ಗುರುಗಳಾಗಿ ಸಿಕ್ಕಿದ್ದರು. ಚಿಕ್ಕವಯಸ್ಸಿನಲ್ಲೇ ತಂದೆಯನ್ನು ಕಳೆದುಕೊಂಡು ಕಷ್ಟದಲ್ಲಿದ್ದ ಅವರಿಗೆ ಸಂಗೀತವೇ ಬೆಳಕಾಯಿತು. ಸ್ವಾತಂತ್ರ್ಯ ಪೂರ್ವದಲ್ಲೇ ಜನಿಸಿದ (1938ರ ನವೆಂಬರ್ 26) ಅವರು, ಆ ಕಾಲದ ಎಲ್ಲ ಕಷ್ಟ–ನಷ್ಟ ಅನುಭವಿಸಿದವರು. ಹತ್ತನೇ ತರಗತಿಯಲ್ಲೇ ಶಾಲೆ ತೊರೆಯುವ ಅನಿವಾರ್ಯತೆಗೆ ಅವರು ಸಿಲುಕಿದರು. ಬಾಸೆಲ್ ಮಿಶನ್ ಬಾಲಕಿಯರ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಅಮ್ಮಣ್ಣ ಅವರು ಅನುರಾಧಾ ಅವರಿಗೆ ಸಂಗೀತ ಶಿಕ್ಷಕಿಯಾಗಿ ಕೆಲಸ ಕೊಟ್ಟರು. ವಿದ್ಯಾರ್ಥಿನಿಯರ ನೆಚ್ಚಿನ ಶಿಕ್ಷಕಿಯಾಗಿ ರೂಪುಗೊಂಡರು. ಮುಂದೆ ಸಂಗೀತದಲ್ಲಿ ಪದವಿ ಪಡೆದರು. ‘ಬೆಳವಲದ ಹಾಡುಹಕ್ಕಿ’ಯಾಗಿ ಖ್ಯಾತಿ ಪಡೆದವರು.

ರಾಮೋತ್ಸವ ಗೀತೆಗಳು, ನವರಾತ್ರಿ ಹಾಡುಗಳು, ರೂಪಕಗಳ ಮೂಲಕ ಶ್ರೋತೃಗಳ ಮನಸೂರೆಗೊಂಡಿದ್ದ ಅನುರಾಧಾ ಅವರು ಮಲ್ಲಿಕಾರ್ಜುನ ಮನಸೂರರ ಸಂಗೀತ ನಿರ್ದೇಶನದಲ್ಲಿ ಹಲವಾರು ಹಾಡುಗಳಿಗೆ ಧ್ವನಿಯಾಗಿದ್ದರು. ಸ್ವತಃ ರಾಗಸಂಯೋಜನೆಯನ್ನೂ ಮಾಡಬಲ್ಲವರಾಗಿದ್ದರು. ಅವರು ನಡೆಸಿಕೊಡುತ್ತಿದ್ದ ‘ತಿಂಗಳ ಲೋಕದ ಅಂಗಳದಲ್ಲಿ’ ರೂಪಕ ಜನಪ್ರಿಯವಾಗಿತ್ತು. ಆಕಾಶವಾಣಿ ಕೆಲಸದಿಂದ ನಿವೃತ್ತಿ ಹೊಂದಿದ ಮೇಲೆ ಸಂಗೀತ ಕಛೇರಿಗಳನ್ನು ನಡೆಸುತ್ತಿದ್ದರು. ಸಂತ ಶಿಶುನಾಳ ಷರೀಫ ಪ್ರಶಸ್ತಿ, ಕರ್ನಾಟಕ ಕಲಾತಿಲಕ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿಗಳು ಅವರಿಗೆ ಸಂದಿದ್ದವು.

ಜೀವನದಲ್ಲಿ ಬಂದದ್ದನ್ನು ಬಂದಹಾಗೆ ಸ್ವೀಕರಿಸುತ್ತಾ, ಯಾವುದಕ್ಕೂ ಹಳಿಯದೆ ತುಂಬು ಜೀವನವನ್ನು ನಡೆಸಿದವರು ಈ ಹಿರಿಯಜ್ಜಿ. ‘ಕೊಡುವುದೇನು ಕೊಂಬುದೇನು...’ ಅವರ ತುಂಬಾ ಪ್ರಿಯವಾದ ಪದ್ಯ. ಲೆಕ್ಕವಿಲ್ಲದಷ್ಟು ಬಾರಿ, ಲೆಕ್ಕವಿಲ್ಲದಷ್ಟು ಕಡೆ ಆ ಗೀತೆಯನ್ನು ಅವರು ಹಾಡಿದ್ದಾರೆ. ‘ಕೊಡುವುದೇನು? ಕೊಂಬುದೇನು?/ ಒಲವು, ಸ್ನೇಹ, ಪ್ರೇಮ/ ಹೊರಗೆ ಬರಿದು, ಒಳಗೆ ಬಲಿದು/ ಇದ್ದವರಿಗೆ ನೇಮ’ ಎಂದು ಹಾಡುತ್ತಿದ್ದ ಅವರು, ಒಲವು, ಸ್ನೇಹ, ಪ್ರೇಮವನ್ನು ಹಂಚುತ್ತಲೇ ಬಾಳಿ ಬದುಕಿದವರು. ಹೊರಗೆ ಬರಿದು, ಒಳಗೆ ಬಲಿದು, ಬದುಕುವ ನೇಮವನ್ನು ಉಳಿದವರಿಗೂ ತೋರಿದವರು. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65